# ಮಹನೀಯರೂ ಆಭರಣ ಪ್ರಿಯರು!

ಪುರುಷರೂ ತಮ್ಮ ದಿರಿಸಿಗೆ ತಕ್ಕಂತೆ ಆಭರಣಗಳನ್ನು ಮುತುವರ್ಜಿಯಿಂದ ಧರಿಸುವ ಮನಸ್ಸು ಮಾಡಿದ್ದಾರೆ. ಪುರುಷರು ಧರಿಸುವ ಒಡವೆ ಫ್ಯಾಷನಬಲ್ ಆಗಿಯೂ ಇರಬೇಕು, ಉಡುಪಿಗೆ ತಕ್ಕಂತೆಯೂ ಇರಬೇಕು. ದಿರಿಸಿಗೆ ತಕ್ಕ ಆಭರಣ ಧರಿಸುವುದು ಹೇಗೆ?

■ ಕೃಷ್ಣವೇಣಿ ಪ್ರಸಾದ್ ಮುಳಿಯ



ಪುರುಷರಿಗೆ ಅಲಂಕಾರದ ಬಗ್ಗೆ ಇರುವ ಆಸೆ ಇಂದಿನದಲ್ಲ. ಈತ ಚತುರ್ವಿಧ ಅಲಂಕಾರಕ್ಕೆ ಮನಸೋತಿದ್ದಾನೆ. ವಸ್ತ್ರ, ಮಾಲೆ, ಅನು ಲೇಪನ, ಆಭರಣ ಇದುವೇ ಆ ಚತುರ್ವಿಧ ಅಲಂಕಾರ. ಬಣ್ಣ ಬಣ್ಣದ ಕಲ್ಲುಗಳನ್ನು ಮಣಿಗಳಾಗಿ, ಪದಕಗಳಾಗಿ, ವಿವಿಧ ಆಕೃತಿಗಳಾಗಿ ರೂಪಿಸಿಕೊಂಡು ಧರಿಸುತ್ತಿದ್ದ ವ್ಯಕ್ತಿ, ಇದಕ್ಕೆ ತಾಮ್ರ, ಬೆಳ್ಳಿ ,ಚಿನ್ನ, ಲೋಹಗಳನ್ನು ಅಳವಡಿಸಿ ಅಂದದ ಸರಗಳನ್ನು ತಯಾರಿಸಿ ಧರಿಸಲು ಪ್ರಾರಂಭಿಸಿದ.

ಪುರಾಣ ಹೇಳುವಂತೆ ಶಿವ ಪಾರ್ವತಿಯರೇ ಆದಿ ದಂಪತಿಗಳು. ಅವರು ಅವರಿಗೆ ಪ್ರಿಯವಾದ ಆಭರಣ ಧರಿಸಿದ್ದಾರೆ, ಅಲಂಕಾರ ಮಾಡಿಕೊಂಡಿದ್ದಾರೆ ಎಂಬ ವರ್ಣನೆ ಇದೆ. ವಿಷ್ಣು ಕೂಡ ಅಲಂಕಾರ ಪ್ರಿಯನೆಂದೇ ಪ್ರಸಿದ್ಧ. ಹಾಗಾಗಿ ಈ ಅಲಂಕಾರ ಎನ್ನುವುದು ದೇವಾನುದೇವತೆಗಳಿಂದಲೇ ಬಂದಂತಹ ವಿಚಾರ. ಪುರುಷರೂ ಮಹಿಳೆಯರೂ ಇದರಿಂದ ಹೊರತಲ್ಲ.

ಇತ್ತೀಚಿನ ದಿನಗಳಲ್ಲಿ ಮಹನೀಯರು ಬಹಳ ಮುತುವರ್ಜಿ ವಹಿಸಿ ಆಭರಣ ಆಯ್ಕೆ ಮಾಡಿ ಧರಿಸುತ್ತಿದ್ದಾರೆ. ಪುರುಷರ ದಿರಿಸು ಕೇವಲ ಪ್ಯಾಂಟು ಶರ್ಟ್ ಮಾತ್ರವೇ, ಏನು ಆಭರಣ ಧರಿಸಲಿ ಅಂತ ಒಂದು ಕಾಲ ಇತ್ತು. ಇಂದು ಹಾಗಲ್ಲ. ಪುರುಷರ ಉಡುಪಿಗೆ ತಕ್ಕಂತೆ ಹಲವು ವಿಧದ ಆಭರಣವೂ ಪುರುಷರಿಗಾಗಿ ಬಂದಿದೆ.

- ಪ್ಯಾಂಟ್ ಶರ್ಟ್‌ಗೆ ಸರಿಹೊಂದುವ ಆಭರಣ
- ಪ್ಯಾಂಟ್ ಕುರ್ತಾ ಆಭರಣ
- ಟೀ ಶರ್ಟ್ ಆಭರಣ
- ಕಚ್ಚೆ ಸ್ಟೈಲ್ ಪ್ಯಾಂಟ್ ಮತ್ತು ಜುಬ್ಬ, ಆಭರಣ
- ದಿರಿಸಿನ ಮೇಲೆ ಕೋಟ್/ಆಭರಣ

